# ಸುನೀಲ್ ಅಗ್ರೋ ಫುಡ್ಸ್ ಲಿಮಿಟೆಡ್

CIN: L01111KA1988PLC008861
ನೋಂ. ಕಚೇರಿ: ಪ್ಲಾಟ್ ನಂ. 39–ಎ2, ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ, ಹೊಸಕೋಟೆ
ಕರ್ನಾಟಕ, 562 114, ದೂರವಾಣಿ: +91– 80– 27971371/ 27971463
ವೆಬ್‌ಸೈಟ್: http://www.sunilagro.in, ಈಮೇಲ್: info@sunilagro.in

## 35ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಇ–ವೋಟಿಂಗ್ ಮಾಹಿತಿ ಮತ್ತು ಪುಸ್ತಕ ಮುಚ್ಚುಗಡೆ

ಈ ಮೂಲಕ ನೋಟೀಸು ನೀಡಲಾಗುತ್ತಿದೆ, ಏನೆಂದರೆ: ನೋಟೀಸಿನಲ್ಲಿ ತಿಳಿಸಲಾಗಿರುವ ಕ್ರಮದಂತೆ ವ್ಯವಹಾರವನ್ನು ನಡೆಸುವ ಸಲುವಾಗಿ ಕಂಪನಿಯ ಮೂವತ್ತೈದನೆಯ (35ನೇ) ವಾರ್ಷಿಕ ಸಾಮಾನ್ಯ ಸಭೆಯನ್ನು (ಎಜಿಎಮ್) ಬುಧವಾರ, 23ನೇ ಆಗಸ್ಟ್, 2023ರಂದು ಬೆಳಿಗ್ಗೆ 11:30ಕ್ಕೆ, ಸದಸ್ಯರು ಒಂದು ಸಾಮಾನ್ಯ ತಾಣದಲ್ಲಿ ಭೌತಿಕವಾಗಿ ಹಾಜರಿರಬೇಕಾದ ಅಗತ್ಯವಿಲ್ಲದಂತೆ ವಿಡಿಯೋ ಕಾನ್ಫರೆನ್ (ವಿ.ಸಿ.) ಇಲ್ಲವೆ ಇತರ ಆಡಿಯೋ ವಿಷುಯಲ್ ಮಾರ್ಗಗಳಿಂದ (ಓಎವಿಎಮ್) ನಡೆಸಲಾಗುವುದು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ 5ನೇ ಮೇ 2022ನೇ ದಿನಾಂಕದ ಸಾಮಾನ್ಯ ಸುತ್ತೋಲೆ ಸಂ. 02/2022 ಹಾಗೂ ಇತರ ಎಲ್ಲ ಸುತ್ತೋಲೆಗಳ ಅನುಸಾರ, ಮತ್ತು ಸೆಬಿಯು ಹೊರಡಿಸಿರುವ 13ನೇ ಮೇ, 2022ನೇ ದಿನಾಂಕದ ಸುತ್ತೋಲೆ ಸಂ. 62 ಹಾಗೂ ಇತರ ಎಲ್ಲ ಸುತ್ತೋಲೆಗಳ ಅನುಸಾರ, ಕಂಪನಿಯು 35ನೇ ಎಜಿಎಮ್‌ನ ನೋಟೀಸನ್ನು ಹಾಗೂ ವಿತ್ತ ವರ್ಷ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ಮಾರ್ಗವಾಗಿ, ಕಂಪನಿಯಲ್ಲಿ/ ಡಿಪಾಸಿಟರಿಗಳಲ್ಲಿ ಯಾರ ಈಮೇಲ್‌ಗಳು ನೋಂದಾಯಿತವಾಗಿವೆಯೋ ಆ ಸದಸ್ಯರೆಲ್ಲರಿಗೂ ಕಳಿಸಿಕೊಟ್ಟಿದೆ. 35ನೇ ಎಜಿಎಮ್‌ನ ನೋಟೀಸನ್ನು ಹಾಗೂ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟಾದ www.sunilagro.in, ಬಿಎಸ್‌ಇ ಲಿಮಿಟೆಡ್‌ನ www.bseindia.com ಹಾಗೂ ಸಿಡಿಎಸ್‌ಎಲ್‌ನ ವೆಬ್‌ಸೈಟುಗಳಲ್ಲಿ ಕೂಡ ಪ್ರಕಟಿಸಲಾಗುವುದು.

ಕಂಪನಿಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗುತ್ತಿದೆ, ಏನೆಂದರೆ: ಸೆಕ್ಯೂರಿಟೀಸ್ ಎಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ಮತ್ತು ಬಹಿರಂಗಪಡಿಸುವ ಅಗತ್ಯಗಳು) ನಿಬಂಧನೆಗಳು, 2015ರ ನಿಬಂಧನೆ 44, ಮತ್ತು ಕಂಪನಿಗಳ ನಿರ್ವಹಣೆ ಮತ್ತು ಆಡಳಿತ (ತಿದ್ದುಪಡಿ) ನಿಯಮಗಳು 2015ರ ನಿಯಮ 20ರ ಜೊತೆಯಲ್ಲಿ ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 108ರ ಅನುಸಾರ, ಎಜಿಎಮ್‌ನ ನೋಟೀಸಿನಲ್ಲಿ ತಿಳಿಸಿರುವ ಎಲ್ಲಾ ನಿರ್ಣಯಗಳ ಮೇಲೂ ಸದಸ್ಯರು ಸೆಂಟ್ರಲ್ ಸರ್ವಿಸಸ್ (ಇಂಡಿಯಾ) ಲಿಮಿಟೆಸ್ (ಸಿಡಿಎಸ್‌ಎಲ್) ಒದಗಿಸುವ ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯನ್ನು ಬಳಸಿಕೊಂಡು ತಮ್ಮ ಮತಗಳನ್ನು ಚಲಾಯಿಸ (ಇ–ವೋಟಿಂಗ್ ಮಾಡ)ಬಹುದಾಗಿದೆ.

ಎಜಿಎಮ್‌ನ ಸಲುವಾಗಿ ಕಂಪನಿಯ ಸದಸ್ಯರ ರಿಜಿಸ್ಟರ್ ಹಾಗೂ ಶೇರು ವರ್ಗಾವಣೆ ಪುಸ್ತಕಗಳು 17ನೇ ಆಗಸ್ಟ್ 2023ರಿಂದ 23ನೇ ಆಗಸ್ಟ್ 2023ರವರೆಗೆ (ಎರಡೂ ದಿನಗಳು ಸೇರಿದಂತೆ) ಮುಚ್ಚಿರುತ್ತವೆ. ಕಟಾಫ್ ದಿನಾಂಕವಾದ 16ನೇ ಆಗಸ್ಟ್ 2023ರಂತೆ ಭೌತಿಕ ರೂಪದಲ್ಲೇ ಆಗಲಿ, ಡಿಮ್ಯಾಟ್ ರೂಪದಲ್ಲೇ ಆಗಲಿ ಶೇರುಗಳನ್ನು ಹೊಂದಿರುವ ಸದಸ್ಯರು, ಎಜಿಎಮ್‌ನ ನೋಟೀಸಿನಲ್ಲಿ ತಿಳಿಸಿರುವ ವ್ಯವಹಾರದ ಕುರಿತಂತೆ ತಮ್ಮ ಮತಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಚಲಾಯಿಸಬಹುದು. ಈ ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯು 20ನೇ ಆಗಸ್ಟ್ 2023ರಂದು (ಬೆಳಿಗ್ಗೆ 9:00 ಗಂಟೆಗೆ) ಶುರುವಾಗಿ, 22ನೇ ಆಗಸ್ಟ್ 2023ರಂದು (ಸಂಜೆ 5 ಗಂಟೆಗೆ) ಕೊನೆಗೊಳ್ಳುತ್ತದೆ. ಇ–ವೋಟಿಂಗ್ ಮಾಡ್ಯೂಲ್‌ಅನ್ನು ಸಿಡಿಎಸ್‌ಎಲ್ ತದನಂತರ ನಿಷ್ಕ್ರಿಯಗೊಳಿಸುತ್ತದೆ. ವಿ.ಸಿ./ಓಎವಿಎಮ್ ಸೌಲಭ್ಯದ ಮುಖಾಂತರ ಎಜಿಎಮ್‌ನಲ್ಲಿ ಹಾಜರಿರುವ ಮತ್ತು ನಿರ್ಣಯಗಳ ಮೇಲೆ ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತಗಳನ್ನು ಚಲಾಯಿಸಿಲ್ಲದ ಹಾಗೂ ಹಾಗೆ ಮಾಡದಂತೆ ಯಾವುದೇ ಕಾರಣದಿಂದ ತಡೆಯಲ್ಪಟ್ಟಿಲ್ಲದ ಸದಸ್ಯರು, ಎಜಿಎಮ್‌ನ ಸಮಯದಲ್ಲಿ ಇ–ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಇ–ವೋಟಿಂಗ್ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ ನಂತರವೂ ಸದಸ್ಯರು ಸಭೆಯಲ್ಲಿ ಭಾಗವಹಿಸಬಹುದು, ಆದರೆ ಸಭೆಯಲ್ಲಿ ಪುನಃ ಮತಚಲಾಯಿಸಲು ಅವಕಾಶ ನೀಡಲಾಗುವುದಿಲ್ಲ. ರಿಮೋಟ್ ವಿ–ವೋಟಿಂಗ್ ಹಾಗೂ ಎಜಿಎಮ್‌ನಲ್ಲಿ ಇ–ವೋಟಿಂಗ್ ಕುರಿತಂತೆ ಸವಿವರವಾದ ಪ್ರಕ್ರಿಯೆಯನ್ನು ಹಾಗೂ ಸೂಚನೆಯನ್ನು 35ನೇ ಎಜಿಎಮ್‌ನ ನೋಟೀಸಿನಲ್ಲಿ ನೀಡಲಾಗಿದೆ.

ಕಂಪನಿಯು ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ಮಾರ್ಗದಲ್ಲಿ ಕಳಿಸಿದ ನಂತರ ಕಂಪನಿಯ ಶೇರುಗಳನ್ನು ಪಡೆದುಕೊಳ್ಳುವ ಮತ್ತು ಕಟಾಫ್ ದಿನಾಂಕವಾದ 16ನೇ ಆಗಸ್ಟ್ 2023ರಂತೆ ಶೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು ವಾರ್ಷಿಕ ವರದಿಯ ಪ್ರತಿಯನ್ನು ಪಡೆದುಕೊಳ್ಳಲು ನಮ್ಮ ಆರ್‌ಟಿಎ ಅನ್ನು, ಎಂದರೆ ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, #30, ರಮಣ ರೆಸಿಡೆನ್ಸಿ, ನೆಲಮಹಡಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560003, ದೂ. 080–23460815 ರಿಂದ 818, ಫ್ಯಾಕ್ಸ್ ನಂ: 080–23460819 ಇವರನ್ನು ಸಂಪರ್ಕಿಸಬಹುದು, ಇಲ್ಲವೆ irg@integratedindia.in ಇವರಿಗೆ ಈಮೇಲ್ ಮಾಡಬಹುದು.

ಸದಸ್ಯರು ಯಾವುದೇ ವಿಚಾರಣೆಗಳಿದ್ದಲ್ಲಿ, ಸದಸ್ಯರಿಗಾಗಿ ಇರುವ https://www.evotingindia.com/userdocs/FAQs.pdf ಇಲ್ಲಿನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಾಮಾನ್ಯ ಪ್ರಶ್ನೆಗಳನ್ನು (ಎಫ್‌ಎಕ್ಯು) ಮತ್ತು ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ನೋಡಬಹುದು, ಇಲ್ಲವೆ ಸಿಡಿಎಸ್‌ಎಲ್‌ನ ಸಹಾಯವಿಭಾಗಕ್ಕೆ helpdesk.evoting@cdslindia.com ಇಲ್ಲಿಗೆ ಈಮೇಲ್ ಕಳಿಸಬಹುದು, ಅಥವಾ 022–23058542 / 43 ಈ ಸಂಖ್ಯೆಗೆ ಕರೆ ಮಾಡಬಹುದು.

ರಿಮೋಟ್ ಇ–ವೋಟಿಂಗ್ ಹಾಗೂ ಎಜಿಎಮ್‌ನಲ್ಲಿನ ಇ–ವೋಟಿಂಗ್‌ನ ಫಲಿತಾಂಶಗಳನ್ನು ಪರಿಶೀಲಕರ ವರದಿಯ ಜೊತೆಯಲ್ಲಿ 23ನೇ ಆಗಸ್ಟ್ 2023ರಂದು ನಡೆಯಲಿರುವ ಎಜಿಎಮ್‌ನ ಮುಕ್ತಾಯವಾದ ಎರಡು ಕೆಲಸದ ದಿನಗಳ ಒಳಗೆ, ಸದಸ್ಯರ ಮಾಹಿತಿಗಾಗಿ ಕಂಪನಿಯ ವೆಬ್‌ಸೈಟಿನಲ್ಲಿ ಹಗೂ ಸಿಡಿಎಸ್‌ಎಲ್‌ನ ವೆಬ್‌ಸೈಟಾದ www.evotingindia.comನಲ್ಲಿ ಇರಿಸಲಾಗುವುದು.

**ಸುನೀಲ್ ಆಗ್ರೋ ಫುಡ್ಸ್ ಲಿಮಿಟೆಡ್‌ಗಾಗಿ**
**ಚಂದ್ರಲಿಕಾ ಶರ್ಮಾ**
**ಕಂಪನಿ ಸೆಕ್ರೆಟರ್ ಮತ್ತು ಕಂಪ್ಲೈಯನ್ಸ್ ಆಫೀಸರ್**
**M. No A62816**

**ಸ್ಥಳ: ಬೆಂಗಳೂರು**
**ದಿನಾಂಕ: 3ನೇ ಆಗಸ್ಟ್, 2023**